**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 68 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | : | 27.01.2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೇಂದ್ರ ಸರ್ಕಾರ ನಿಗದಿ ಮಾಡಿದ FRP 10.25% ಇಳುವರಿ ಬದಲು, 9.5% ಆಧಾರದ ಮೇಲೆ ದರ ನಿಗಧಿ ಮಾಡಲಾಗುತ್ತಿದೆಯೇ; | ಕಬ್ಬು (ನಿಯಂತ್ರಣ) ಆದೇಶ 1966 ರ ಖಂಡ 3(1) ರನ್ವಯ ಕಬ್ಬಿನ ದರವನ್ನು ನಿಗದಿಪಡಿಸುವ ವಿಷಯವು ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಬರುತ್ತದೆ.<br>ಕೇಂದ್ರ ಸರ್ಕಾರವು ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ (CACP) ಶಿಫಾರಸ್ಸುಗಳನ್ನು ಆಧರಿಸಿ ಪ್ರತಿ ಸಕ್ಕರೆ ಹಂಗಾಮಿನಲ್ಲಿ, ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ಪಾವತಿಸಬೇಕಾಗಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (FRP) ನಿಗದಿಪಡಿಸುತ್ತದೆ.<br>ಕಬ್ಬಿನ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP - Fair and Remunerative Price) ಪರಿಕಲ್ಪನೆಯನ್ನು ಭಾರತದಲ್ಲಿ 2009 ರಲ್ಲಿ ಪರಿಚಯಿಸಲಾಯಿತು. ಕೇಂದ್ರ ಸರ್ಕಾರವು ಕಬ್ಬಿನ ಬೆಲೆ (FRP) ಮತ್ತು ಸಕ್ಕರೆ ಇಳುವರಿ ದರದ ಬದಲಾವಣೆಯನ್ನು ಕಾಲಕಾಲಕ್ಕೆ ಮಾಡಿರುತ್ತದೆ.<br>ಕಳೆದ ದಶಕದಲ್ಲಿ ಕಬ್ಬಿನ ಬೆಲೆಯು ಹಂತ ಹಂತವಾಗಿ ಏರಿಕೆಯಾಗುತ್ತಾ ಬಂದಿದೆ. ಇದರ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:<br>• 2010-11 ರಿಂದ 2017-18 : 2010-11ರಲ್ಲಿ ಪ್ರತಿ ಕ್ವಿಂಟಾಲ್‌ಗೆ ₹139.12 ರಿಂದ ಪ್ರಾರಂಭವಾದ ಬೆಲೆಯು 2017-18ರ ವೇಳೆಗೆ ₹255 ಕ್ಕೆ ಏರಿಕೆಯಾಯಿತು. ಈ ಅವಧಿಯಲ್ಲಿ ಮೂಲ ಇಳುವರಿ ದರವನ್ನು (Basic Recovery Rate) 9.50% ಕ್ಕೆ ಸ್ಥಿರವಾಗಿ ಇರಿಸಲಾಗಿತ್ತು.<br>• 2018-19 ರಿಂದ 2021-22 : 2018-19ರಲ್ಲಿ ಮೊದಲ ಬಾರಿಗೆ ಮೂಲ ಇಳುವರಿ ದರವನ್ನು 9.5% ರಿಂದ 10.00% ಕ್ಕೆ ಹೆಚ್ಚಿಸಲಾಯಿತು. ಈ ಹಂತದಲ್ಲಿ ಬೆಲೆಯು ₹275 ರಿಂದ ₹290 ವರೆಗೆ ಏರಿತು.<br>• 2022-23 ರಿಂದ 2025-26 : 2022-23ರಲ್ಲಿ ಮೂಲ ಇಳುವರಿ ದರವನ್ನು 10% ರಿಂದ 10.25% ಕ್ಕೆ ಹೆಚ್ಚಿಸಲಾಯಿತು. ಪ್ರಸ್ತುತ 2025-26 ನೇ ಸಾಲಿಗೆ ಪ್ರತಿ ಕ್ವಿಂಟಾಲ್‌ಗೆ ₹355.00 ದರವನ್ನು ಘೋಷಿಸಿರುತ್ತದೆ. |
| (ಆ) | 2025-26ನೇ ಸಾಲಿನ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಕಾಯ್ದಿಟ್ಟ 30 ಕೋಟಿಗಳು ಆಯಾ ಸಕ್ಕರೆ ಕಾರ್ಖಾನೆಗಳಲ್ಲಿ ಮಾತ್ರ ಕಬ್ಬು ಲಾರಿಗಳ ಡಿಜಿಟಲ್ ತೂಕದ ಯಂತ್ರಗಳನ್ನು<br>ಅಳವಡಿಸುವುದು, ಅದರ ಕೀ ಯನ್ನು APMC ಗಳು ಸರಿಯಾದ | 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 71 ರ ಘೋಷಣೆಯಂತೆ, ರೈತರಿಗೆ ತೂಕದಲ್ಲಾಗುವ ಮೋಸವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ಆಯ್ದ 10 ಸ್ಥಳಗಳಲ್ಲಿ ಡಿಜಿಟಲ್ ವೇ-ಬ್ರಿಡ್ಜ್ ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದರಲ್ಲಿ 1) ಬೆಳಗಾವಿ-ಹಿರೇಬಾಗೇವಾಡಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 2) ಮುಧೋಳ, 3) ಯರಗಟ್ಟಿ, 4) ಬಾದಾಮಿ-ಕೆರೂರು ಮತ್ತು 5) ಮಹಾಲಿಂಗಪುರ ಸ್ಥಳಗಳಿಗೆ ಕಾರ್ಯಾದೇಶವನ್ನು |

| | | |
|---|---|---|
| | ರೀತಿಯಲ್ಲಿ ನಿರ್ವಹಣೆ ಮಾಡುತ್ತಿವೆಯೇ; | ನೀಡಲಾಗಿದೆ. ಮುಂದುವರಿದು, 6)ಬೈಲಹೊಂಗಲ-ನೇಸರಗಿ ಮತ್ತು 7) ಕೊಳ್ಳೇಗಾಲ-ಚಿಲಕವಾಡಿ ಗಳಿಗೆ Letter of Intent (LoI) ನೀಡಲಾಗಿರುತ್ತದೆ ಮತ್ತು 8) ಮದ್ದೂರು-ಗುಡಿಗೆರೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು 9) ಅಲಮೇಲ ಮತ್ತು 10) ವಿಜಯಪುರ- ಕೊಲ್ಹಾರ ಸ್ಥಳಗಳಿಗೆ ಆಡಳಿತಾತ್ಮಕ ಮಂಜೂರಾತಿಯಾಗಿದ್ದು, ಟೆಂಡರ್ ಕರೆಯಲು ಕ್ರಮವಹಿಸಲಾಗಿದೆ. |
| ಇ) | ಕಬ್ಬು ಸಾಗಾಣಿಕೆಯನ್ನು ಪ್ರತಿ ಕಿಲೋ ಮೀಟರ್‌ದಂತೆ ಸಾಗಾಣಿಕೆ ಮತ್ತು ಕಬ್ಬು ನಿರ್ವಹಣೆ (H&T) ಸರ್ಕಾರದ ಆದೇಶದ ಮಾನದಂಡನೆಗಳನ್ನು ಕಡ್ಡಾಯ ಪಾಲನೆ ಮಾಡಲಾಗುತ್ತಿದೆಯೇ; (ಎಕ್ಸ್‌ಫೀಲ್ಡ್) | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಮತ್ತು ಅಧ್ಯಕ್ಷರು ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:10.06.2025ರಂದು ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ 2025-26ನೇ ಸಾಲಿಗೆ ಅನ್ವಯವಾಗುವ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ದರಗಳನ್ನು ಹಾಗೂ ಮಾರ್ಗಸೂಚಿಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ, 2025-26ನೇ ಹಂಗಾಮಿನ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ದರ ಹಾಗೂ ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಿಂದ ಅನ್ವಯವಾಗುವಂತೆ ಕಟ್ಟುನಿಟ್ಟಾಗಿ ಜಾರಿಗೊಳಿಸಲು ದಿನಾಂಕ:26.08.2025 ರಂದು ಆದೇಶವನ್ನು ಹೊರಡಿಸಲಾಗಿರುತ್ತದೆ. ಅದರಂತೆ ಕಾರ್ಖಾನೆಗಳು ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುತ್ತಿವೆ. |
| ಈ) | ಆರ್ಥಿಕ ತಜ್ಞ ಸಿ. ರಂಗರಾಜನ್ ವರದಿಯಂತೆ, ಸಕ್ಕರೆ ನಂತರ, ಉತ್ಪಾದನೆ ಹಾಗೂ ಉಪ ಉತ್ಪನ್ನಗಳಾದ 1, ಮೋಲಾಸಿಸ್, ಕೋಜನ್, ಬಗ್ಯಾಸ್, ಸಿಪ್ಪೆ, ವಿದ್ಯುತ್, ಎಥೆನಾಲ್ ದಂತಹ ಬಂದ ಆದಾಯದಲ್ಲಿ %70-30 ಅನುಪಾತದಲ್ಲಿ ಆದಾಯ ಹಂಚಿಕೆ ಸೂತ್ರ ಅಳವಡಿಸಲು ಸಾಧ್ಯವಾಗಬಹುದೇ; (Revenue Sharing Formula)? | ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 4ಡಿ ರ ಪ್ರಕಾರ ವರ್ಷದಲ್ಲಿ ಅರೆದ ಕಬ್ಬಿನಿಂದ ಪ್ರಾಪ್ತವಾದ ಆದಾಯವು, ಸಕ್ಕರೆಯ ವಾಸ್ತವ ಉತ್ಪಾದನೆ ಮತ್ತು ಅದರ ಉಪ ಉತ್ಪತ್ತಿಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್-ಮಡ್ ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ಅವುಗಳನ್ನು ಮಾರಾಟ ಮಾಡಿರದಿದ್ದಾಗ್ಯೂ, ಮಾರಾಟಗಳು, ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನನ್ನು ಪರಿಗಣಿಸಿ ಸೂಕ್ತವಾಗಿ ಮೌಲ್ಯ ಮಾಡಿ ಆದಾಯ ಪ್ರಾಪ್ತಿಯ ಮೇಲೆ ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸಲು ಅವಕಾಶ ಇರುತ್ತದೆ. ಸದರಿ ಆದಾಯದಲ್ಲಿ 70-30% ಅನುಪಾತದಲ್ಲಿ ರೈತರು ಮತ್ತು ಕಾರ್ಖಾನೆಗಳಿಗೆ ಆದಾಯ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. |

**ಸಂಖ್ಯೆ:**ಸಿಐ 45 ಎಸ್‌ಜಿಎಫ್ 2026

**(ಶಿವಾನಂದ ಎಸ್ ಪಾಟೀಲ್)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು